**ಪಾಟೀ ಸವಾಲು ಃ ಪ್ರತಿವಾದಿಯ ಪರ ವಕೀಲರಾದ**
**ಶ್ರೀ ಕೆ ಟಿ ಎಸ್ ರವರಿಂದ ಃ-**
**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಡಿ.ಡಬ್ಲ್ಯೂ. 1. ದಿಃ 17-11-2018. ಓ ಎಸ್ ನಂ ಃ 51/2007**

ಕಳ್ಳಿಪಾಳ್ಯದ ರಿ ಸರ್ವೆ ನಂ. 41/4 ಪೋಡಿಯಾಗಿರುವ ವಿಚಾರ ನನಗೆ ಗೊತ್ತಿಲ್ಲ. ನಿ ಪಿ 3 ರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ. ಸರ್ವೆ ನಂ. 41/5 ರಲ್ಲಿ 1 ಎಕರೆ 22 ಗುಂಟೆ ಜಮೀನು ಇರುತ್ತದೆ. ನಿ ಪಿ 5 ರಂತೆ ಸರ್ವೆ ನಂ. 41/4 ರಲ್ಲಿ 1 ಎಕರೆ 34 ಗುಂಟೆ ಜಮೀನು ಮತ್ತು ಸರ್ವೆ ನಂ. 41/5 ರಲ್ಲಿ 1 ಎಕರೆ 22 ಗುಂಟೆ ಜಮೀನು ಅಬ್ಬತ್ತನಹಳ್ಳಿ ತಳವಾರ ರಂಗಯ್ಯನ ಮಗ ಬಾಗೂರಯ್ಯನು ಗುಬ್ಬಿ ಹುಚ್ಚಪ್ಪನಿಗೆ 5 ವರ್ಷ ವಾಯಿದಿಗೆ ರೂ. 75-00 ಕ್ಕೆ ಭೋಗ್ಯ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಪಿ 8 ರಂತೆ ಸರ್ವೆ ನಂ. 41/5 ರ 1 ಎಕರೆ 22 ಗುಂಟೆ ಜಮೀನಿನಲ್ಲಿ ಅಬ್ಬತ್ತನ ಹಳ್ಳಿ ನಾಯಕರ ರಂಗಯ್ಯ ಸ್ವಾಧೀನಾನುಭವದಲ್ಲಿ ಇದ್ದರು ಎಂದು ನಮೂದು ಇರುತ್ತದೆಂದರೆ ಸರಿಯಲ್ಲ.

ಅಬ್ಬತ್ತನಹಳ್ಳಿ ನಾಯಕರ ರಂಗಯ್ಯನಿಗೆ ಬಾಗೂರಯ್ಯ ಏಕೈಕ ಮಗ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ರಂಗಯ್ಯನಿಗೆ ಇಬ್ಬರು ಮಕ್ಕಳು ಇರುವುದಾಗಿ ನುಡಿಯುತ್ತಾರೆ. ಬಾಗೂರಯ್ಯನಿಗೆ 3 ಜನ ಮಕ್ಕಳು ಃ 1. ರಂಗಯ್ಯ, 2. ಕೋಡಪ್ಪ ಮತ್ತು 3. ಹನುಮಂತಯ್ಯ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿಗಳ 12ನೇ ನಂಬರ್ ಕಾಲಂನಲ್ಲಿ ರಂಗಯ್ಯ ಬಿನ್ ಬಾಬೂರಯ್ಯನ ಹೆಸರು ಬರುತ್ತಿದ್ದು ಈಗಲೂ ದಾವಾ ಆಸ್ತಿಯ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಅಬ್ಬತ್ತನ ಹಳ್ಳಿಯ ಗ್ರಾಮದ ವಾಲೇಕಾರ ರಂಗಯ್ಯನ ಮಕ್ಕಳಾದ 1. ಚಿಕ್ಕರಂಗಯ್ಯ. 2. ರಾಮಯ್ಯ ಮತ್ತು 3. ಲಕ್ಷ್ಮಣ ಇವರು ಅಬ್ಬತ್ತನ ಹಳ್ಳಿಯ ಸಿದ್ದಣ್ಣನ ಮಗ ಗಂಗಣ್ಣನಿಗೆ ಸರ್ವೆ ನಂ. 24/1 ರಲ್ಲಿ

2 ಎಕರೆ 16 ಗುಂಟೆ ಜಮೀನನ್ನು ರೂ. 300-00 ಗಳಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ.

ಅಬ್ಬತ್ತನಹಳ್ಳಿ ವಾಲೀಕರ ರಂಗಯ್ಯ ಮತ್ತು ಅಬ್ಬತ್ತನಹಳ್ಳಿ ನಾಯಕರ ರಂಗಯ್ಯ ಬೇರೆ ಬೇರೆ ಎಂದರೆ ಸರಿ. ಅವರ ಕುಟುಂಬಗಳು ಸಹಾ ಬೇರೆ ಬೇರೆ ಎಂದರೆ ಸರಿ. 1ನೇ ಪ್ರತಿವಾದಿ ತನ್ನ ಹೆಸರಿಗೆ ದಾವಾ ಆಸ್ತಿಯ ಖಾತೆ-ಪಹಣಿ ಬದಲಾವಣೆ ಮಾಡಿಕೊಳ್ಳಲು ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ಊರ್ಜಿತ ಗೊಂಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎಂ ಆರ್ ನಂ. 25/1981-1982 ಅನೂರ್ಜಿತವಾಗಿದ್ದರೂ ಸಹಾ ಪಹಣಿಯಲ್ಲಿ ಸದರಿ ಎಂ ಆರ್‌ನ ಆಧಾರವಾಗಿ 1ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಬಾಗೂರಯ್ಯನ ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ 11 ರಂತೆ ನನ್ನ ಪರವಾಗಿ ಕ್ರಯ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನನ್ನ ಹೆಸರಿಗೆ ದಾವಾ ಆಸ್ತಿಯ ಮತ್ತು ಸರ್ವೆ ನಂ. 40/1 ರ ವಿಸ್ತೀರ್ಣ 1 ಎಕರೆ 12 ಗುಂಟೆ ಜಮೀನಿಗೆ ಎಂ ಆರ್ ನಂ. 10/982-1983 ರಂತೆ ಖಾತೆ ಆಗಿದ್ದರೂ ಸಹಾ ನಾನು ಸದರಿ ಆಸ್ತಿಗಳಲ್ಲಿ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇಂದಿಗೂ ಇದ್ದಾರೆಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಗಳಿಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಗಳಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಲಾಗಿ, ಸಮಯ ನೀಡಿ ಮುಂದೂಡಲಾಯಿತು. )**

**(ತೆ ನ್ಯಾ ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇಳಿ ಕೇಳಿ ಸರಿ ಇದೆ.**

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ,, ಗುಬ್ಬಿ**